# ನಗರಸಭಾ ಕಾರ್ಯಾಲಯ, ತುಮಕೂರು

ನಂ.ನಸತು:ತಾಂಶಾ/ಎಸ್.ಎಫ್.ಸಿ.(ಮುನಿ)/ಟೆಂಡರ್/ಸಿಆರ್/31/2008–09 ದಿನಾಂಕ 07–02–2009.

## ಅಲ್ಪಾವಧಿ ಟೆಂಡರ್ ಪ್ರಕಟಣೆ

ತುಮಕೂರು ನಗರಸಭೆಗೆ 2008–09ನೇ ಸಾಲಿನಲ್ಲಿ ಎಸ್.ಎಫ್.ಸಿ. ಮುಕ್ತ ನಿಧಿ ಅನುದಾನದಲ್ಲಿ ಬಿಡುಗಡೆಯಾಗಿರುವ ಮೊತ್ತಕ್ಕೆ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆಧ್ಯಾದೇಶ 2000 ರಂತೆ ಸ್ಟಾಂಡರ್ಡ್ ಟೆಂಡರ್ಸ್ ಡಾಕ್ಯುಮೆಂಟ್‌ನ ಸೂಚನೆ ಮತ್ತು ನಿಬಂಧನೆಗೊಳಪಟ್ಟಂತೆ ಅರ್ಹ ದರ್ಜೆಯ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಗುತ್ತಿಗೆದಾರರುಗಳಿಂದ ನಿಗದಿಪಡಿಸಿದ ನಮೂನೆಗಳಲ್ಲಿ ಮೊಹರು ಮಾಡಲಾದ ಲಕೋಟೆಯ ಮೇಲೆ ಕಾಮಗಾರಿಯ ಹೆಸರನ್ನು ನಮೂದಿಸಿದ **ಐಟಂವಾರು ಟೆಂಡರ್‌ಗಳನ್ನು** ದ್ವಿಪತ್ರಿಯಲ್ಲಿ ಪೌರಾಯುಕ್ತರು, ನಗರಸಭೆ, ತುಮಕೂರು ಇವರಿಗೆ ಸಲ್ಲಿಸಲು ಆಹ್ವಾನಿಸಲಾಗಿದೆ.

1. ಟೆಂಡರ್ ಫಾರಂಗಳನ್ನು ನೀಡುವ **ದಿನಾಂಕ 07–02–2009 ರಿಂದ 20–02–2009** ರವರಗೆಗೆ ಕಛೇರಿಯ ವೇಳೆಯಲ್ಲಿ ಟೆಂಡರ್ ಶುಲ್ಕ ಪಾವತಿಸಿದ ಅರ್ಹ ಗುತ್ತಿಗೆದಾರರಿಗೆ ನೀಡಲಾಗುವುದು.
2. ಭರ್ತಿ ಮಾಡಿದ ಫಾರಂಗಳನ್ನು **ದಿನಾಂಕ 21–02–2009 ರಂದು 4.30 ಗಂಟೆಯೊಳಗಾಗಿ** ಪೌರಾಯುಕ್ತರು, ನಗರಸಭೆ, ತುಮಕೂರು ರವರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಅಥವಾ ಮಾನ್ಯ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ರವರ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಹಾಕಬಹುದಾಗಿದೆ.
3. **ಸಲ್ಲಿಸಲಾಗಿರುವ ಟೆಂಡರ್‌ಗಳನ್ನು ಸಾಧ್ಯವಾದರೆ ದಿನಾಂಕ 21–02–2009 ರಂದು 4.45** ಗಂಟೆಗೆ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಅಥವಾ ಮರುದಿನ ಕಛೇರಿ ವೇಳೆಯಲ್ಲಿ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ(ಲಕ್ಷ ರೂ. ಗಳಲ್ಲಿ | ಇಎಂಡಿ ಮೊತ್ತ (ರೂ.ಗಳಲ್ಲಿ) | ಅರ್ಹ ದರ್ಜೆ ಗುತ್ತಿಗೆದಾರರು | ಟೆಂಡರ್ ಫಾರಂ ಬೆಲೆ+ ತೆರಿಗೆ | ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ |
|---|---|---|---|---|---|---|
| **ಪ್ಯಾಕೇಜ್ – 01** | | | | | | |
| 1. | ನಗರದ ರಂಗಾಪುರದ ಊರು ಒಳಗಡೆ, ಮರಳೆನಹಳ್ಳಿ ಮತ್ತು ಪಂಚನಾಥನಪಾಳ್ಯದಲ್ಲಿ ರಸ್ತೆ ಅಭಿವೃದ್ಧಿ ಮತ್ತು ಡೆಕ್‌ಸ್ಲಾಬ್ ಕಾಮಗಾರಿ. | 9.80 | 59000.00 | 1ನೇ ದರ್ಜೆ | 2950+ ತೆರಿಗೆ | ಮಳೆಗಾಲ ಸೇರಿ ಮೂರು ತಿಂಗಳು |
| | ನಗರದ ಶಿರಾಗೇಟ್ ಕಾಳಿದಾಸ ನಗರದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಡೆಕ್‌ಸ್ಲಾಬ್ ನಿರ್ಮಾಣ ಕಾಮಗಾರಿ. | 9.80 | | | | |
| | ನಗರದ ದಾದಯ್ಯನವರ ಮನೆ ಮೂಲಕ ಎನ್.ಹೆಚ್. 4 ನಿಂದ ಐಡಿಎಸ್‌ಎಂಟಿ ಲೇಔಟ್‌ಗೆ ಲಿಂಕ್ ಮಾಡುವ ರಸ್ತೆ ಅಭಿವೃದ್ಧಿ ಕಾಮಗಾರಿ. | 9.80 | | | | |
| | **ಒಟ್ಟು** | **29.40** | | | | |

| | | | | | | |
|---|---|---|---|---|---|---|
| **ಪ್ಯಾಕೇಜ್ – 02** | | | | | | |
| 2. | ನಗರದ ಆಯಿಲ್‌ಮಿಲ್ ರಸ್ತೆಯ ಬಲಭಾಗದ ರಸ್ತೆಗಳಿಗೆ ಹಾಗೂ ಕುಂಬಾರ ಬೀದಿ, ಗೌಡರ ಬೀದಿಗಳ ಮತ್ತು ಅಕ್ಕಪಕ್ಕದ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮತ್ತು ಡೆಕ್‌ಸ್ಲಾಬ್ ನಿರ್ಮಾಣ. | 9.80 | 59000.00 | 1ನೇ ದರ್ಜೆ | 2950+ ತೆರಿಗೆ | ಮಳೆಗಾಲ ಸೇರಿ ಮೂರು ತಿಂಗಳು |
| | ನಗರದ ಶ್ರೀರಾಮನಗರದಲ್ಲಿ ಮತ್ತು ಗಾರ್ಡನ್ ರಸ್ತೆಯಿಂದ ಶನಿದೇವರ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ಆರ್.ಸಿ.ಸಿ. ಚರಂಡಿ ಮತ್ತು ಡೆಕ್‌ಸ್ಲಾಬ್ ಕಾಮಗಾರಿ. | 9.80 | | | | |
| | ನಗರದ ದಿಬ್ಬೂರುಮಾಳೆ, ನೆಲಮಾರಯ್ಯನಪಾಳ್ಯ, ಕುಂಟಮ್ಮನತೋಟದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಹಾಗೂ ಭೀಮಸಂದ್ರದಲ್ಲಿ ರಸ್ತೆ ಅಭಿವೃದ್ಧಿ | 9.80 | | | | |
| | **ಒಟ್ಟು** | **29.40** | | | | |
| **ಪ್ಯಾಕೇಜ್ – 03** | | | | | | |
| 3. | ನಗರದ ಬೀಬಿಜಾನ್ ಲೇಔಟ್‌ನಲ್ಲಿ ಮುಖ್ಯ ರಸ್ತೆಯಲ್ಲಿ ಮತ್ತು ಅಡ್ಡ ರಸ್ತೆಗಳಲ್ಲಿ ಪೈಪ್‌ಲೈನ್ ಮತ್ತು ಅಗ್ರಹಾರ ಮತ್ತು ಶಿಶುವಿಹಾರ ಅಕ್ಕಪಕ್ಕದ ಮತ್ತು ಅಡ್ಡ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ನಿರ್ಮಾಣ | 9.80 | 59000.00 | 1ನೇ ದರ್ಜೆ | 2950+ ತೆರಿಗೆ | ಮಳೆಗಾಲ ಸೇರಿ ಮೂರು ತಿಂಗಳು |
| | ನಗರದ ಕೆ.ಹೆಚ್.ಬಿ. ಕಾಲೋನಿಯಲ್ಲಿ ಮತ್ತು ಪಿ.ಜಿ. ಲೇಔಟ್‌ನಲ್ಲಿ 5ನೇ ಕ್ರಾಸ್ ಮತ್ತು ಅಡ್ಡ ರಸ್ತೆಗಳು ಹಾಗೂ ಕುಂಟಮ್ಮನತೋಟದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ | 9.80 | | | | |
| | ನಗರದ ಗೋವಿಂದನಗರದಲ್ಲಿ ವೆಂಕಟೇಶ್ವರ ಬಾಬುರವರ ಮನೆಯ ಮುಂಭಾಗ ಮತ್ತು ಅಡ್ಡ ರಸ್ತೆಗಳು ಹಾಗೂ ಜಯಪುರದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಸಿ.ಸಿ. ಚರಂಡಿ ನಿರ್ಮಾಣ | 9.80 | | | | |
| | **ಒಟ್ಟು** | **29.40** | | | | |
| **ಪ್ಯಾಕೇಜ್ – 04** | | | | | | |
| 4. | ನಗರದ ಪಿ.ಹೆಚ್.ಕಾಲೋನಿ ಬಾಂಬೆ ಬಿಲ್ಡಿಂಗ್ ರಸ್ತೆಯ ಬಲಭಾಗದ 11, 12, 13, 14ನೇ ಕ್ರಾಸ್‌ಗಳನ್ನು ಸಿ.ಸಿ. ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿ. | 9.80 | 59000.00 | 1ನೇ ದರ್ಜೆ | 2950+ ತೆರಿಗೆ | ಮಳೆಗಾಲ ಸೇರಿ ಮೂರು ತಿಂಗಳು |
| | ನಗರದ ರಾಜೀವ್‌ಗಾಂಧಿ ನಗರ (ಆಶ್ರಯ ಕಾಲೋನಿ) ಬಿ ಬ್ಲಾಕ್ 1ನೇ ಮುಖ್ಯ ರಸ್ತೆ ಶಿವಶಂಕರ್ ಮನೆಯ ರಸ್ತೆ ಹಾಗೂ ಸದಾಶಿವನಗರ 6ನೇ ಕ್ರಾಸ್‌ಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ. | 9.80 | | | | |

| | | | | | | |
|---|---|---|---|---|---|---|
| | ನಗರದ ನಜಾರಾಬಾದ್, ಜಯನಗರ, ಮರಾಠರ ಬೀದಿ, ಕುರಿಪಾಳ್ಯದ ಹೊಸಕೊಳವೆಬಾವಿ ಯಿಂದ ಪೈಪ್‌ಲೈನ್, ವೀರಸಾಗರ 2, 3ನೇ ಕ್ರಾಸ್‌ನಲ್ಲಿ ಮತ್ತು ಇತರೆ ಪ್ರದೇಶದಲ್ಲಿ ರಸ್ತೆ ಅಭಿವೃದ್ಧಿ | 9.80 | | | | |
| | **ಒಟ್ಟು** | **29.40** | | | | |
| **ಪ್ಯಾಕೇಜ್ – 05** | | | | | | |
| 5. | ನಗರದ ಟಿಪ್ಪು ನಗರದಲ್ಲಿ ರಸ್ತೆ ಅಭಿವೃದ್ಧಿ ಚರಂಡಿ ಕಾಮಗಾರಿ. | 9.80 | 59000.00 | 1ನೇ ದರ್ಜೆ | 2950+ ತೆರಿಗೆ | ಮಳೆಗಾಲ ಸೇರಿ ಮೂರು ತಿಂಗಳು |
| | ನಗರದ ವಿನೋಬನಗರ, ಗಣೇಶ ದೇವಸ್ಥಾನದ ಹಿಂಭಾಗದ ಅಡ್ಡ ರಸ್ತೆಗಳಲ್ಲಿ ಪಿವಿಸಿ ಪೈಪ್‌ಲೈನ್ ಮತ್ತು ಆರ್.ಸಿ.ಸಿ. ರಸ್ತೆ ಕಾಮಗಾರಿ. | 9.80 | | | | |
| | 15ನೇ ವಾರ್ಡ್‌ನ ಗಾಂಧಿನಗರದಲ್ಲಿ ಕನ್ಸರ್‌ವೆನ್ಸಿಗಳಲ್ಲಿ ಮತ್ತು ಎಸ್.ಎಸ್. ಪುರಂ, ಸಿಎಸ್‌ಐ ಲೇಔಟ್ ಕನ್ಸರ್‌ವೆನ್ಸಿಗಳಲ್ಲಿ ಮಣ್ಣು ತೆಗೆಯುವುದು ಮತ್ತು ಎಸ್.ಎಸ್.ಪುರಂ ಅಡ್ಡ ರಸ್ತೆಗಳಲ್ಲಿ ಸಿಎಸ್‌ಐ ಲೇಔಟ್ (ವಿವೇಕಾನಂದ ನಗರ) ಅಡ್ಡ ರಸ್ತೆಗಳಲ್ಲಿ ಕಲ್ವರ್ಟ್ ಮತ್ತು ಚರಂಡಿ ಕಾಮಗಾರಿ. | 9.80 | | | | |
| | **ಒಟ್ಟು** | **29.40** | | | | |
| **ಪ್ಯಾಕೇಜ್ – 06** | | | | | | |
| 6. | ನಗರದ ಅರಳೇಪೇಟೆ ಬಸವಣ್ಣನ ದೇವಸ್ಥಾನದ ರಸ್ತೆಯಲ್ಲಿ ಮತ್ತು ಅಡ್ಡ ರಸ್ತೆಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ | 9.80 | 59000.00 | 1ನೇ ದರ್ಜೆ | 2950+ ತೆರಿಗೆ | ಮಳೆಗಾಲ ಸೇರಿ ಮೂರು ತಿಂಗಳು |
| | ನಗರದ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಮಸೀದಿಯವರೆಗೆ ಚರಂಡಿ ನವೀಕರಣ ಹಾಗೂ ಆಚಾರ್ ಮತ್ತು ಇಡ್ಲಿಕುಮಾರ್‌ರವರ ಮನೆ ರಸ್ತೆ ಮತ್ತು ಚರಂಡಿ ನಿರ್ಮಾಣ | 9.80 | | | | |
| | ನಗರದ ಶಾಂತಿನಗರ 2ನೇ ಮುಖ್ಯ ರಸ್ತೆಯಿಂದ ಗಣೇಶನ ದೇವಸ್ಥಾನದ ಮುಂಭಾ ಗದವರೆಗೆ ಸಿ.ಸಿ. ರಸ್ತೆ ಮತ್ತು ಬನಶಂಕರಿ 2ನೇ ಹಂತದಲ್ಲಿ ಚರಂಡಿ ನಿರ್ಮಾಣ ಕಾಮಗಾರಿ. | 9.80 | | | | |
| | **ಒಟ್ಟು** | **29.40** | | | | |
| **ಪ್ಯಾಕೇಜ್ – 07** | | | | | | |
| 7. | ನಗರದ ಹುರುಳಿತೋಟ ಶ್ರೀರಾಮಮಂದಿರದ ರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ಕಾಮಗಾರಿ. ಮತ್ತು ಶ್ರೀರಾಮನಗರದಲ್ಲಿ ಆಂಜನೇಯ ಸ್ವಾಮಿ ದೇವಸ್ಥಾನದ ಪಕ್ಕದ ರಸ್ತೆ ಅಭಿವೃದ್ಧಿ ಕಾಮಗಾರಿ. | 9.80 | 59000.00 | 1ನೇ ದರ್ಜೆ | 2950+ ತೆರಿಗೆ | ಮಳೆಗಾಲ ಸೇರಿ ಮೂರು ತಿಂಗಳು |

| | | | | | | |
|---|---|---|---|---|---|---|
| | ನಗರದ ಆದರ್ಶನಗರದಲ್ಲಿ ನಿವೃತ್ತ ತಹಶೀಲ್ದಾರ್ ರಂಗಪ್ಪನವರ ಮನೆ ಹತ್ತಿರ ಚರಂಡಿ, ರಸ್ತೆ ನಿರ್ಮಾಣ ಮತ್ತು ಬೈಲಾಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ರಾಜಣ್ಣನವರ ಮನೆ ಹತ್ತಿರ ಚರಂಡಿ ನಿರ್ಮಾಣ | 9.80 | | | | |
| | ನಗರದ ವಿದ್ಯಾನಗರ ಕುವೆಂಪುನಗರ 2ನೇ ಅಡ್ಡ ರಸ್ತೆಯಲ್ಲಿ ಸಿ.ಸಿ. ಚರಂಡಿ ಮತ್ತು ರಸ್ತೆ ನಿರ್ಮಾಣ | 9.80 | | | | |
| | **ಒಟ್ಟು** | **29.4** | | | | |
| **ಪ್ಯಾಕೇಜ್ – 08** | | | | | | |
| 8. | ನಗರದ ಭಾರತಿ ನಗರ ಮುಖ್ಯ ರಸ್ತೆಯಲ್ಲಿ ಚರಂಡಿ ನಿರ್ಮಾಣ ಕಾಮಗಾರಿ. | 9.80 | 59000.00 | 1ನೇ ದರ್ಜೆ | 2950+ ತೆರಿಗೆ | ಮಳೆಗಾಲ ಸೇರಿ ಮೂರು ತಿಂಗಳು |
| | ನಗರದ ಭಾಗ್ಯನಗರ ಮುಖ್ಯ ರಸ್ತೆಯಲ್ಲಿ ಸರ್ಕಾರಿ ಪಾಠಶಾಲೆ ಹತ್ತಿರ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ. | 9.80 | | | | |
| | ನಗರದ ಉಪ್ಪಾರಹಳ್ಳಿ ಬಡಾವಣೆ ಆಂಜನೇಯಸ್ವಾಮಿ ಮತ್ತು ಶನಿದೇವರ ದೇವಸ್ಥಾನದ ರಸ್ತೆ ಅಭಿವೃದ್ಧಿ ಕಾಮಗಾರಿ. | 9.80 | | | | |
| | **ಒಟ್ಟು** | **29.40** | | | | |
| **ಪ್ಯಾಕೇಜ್ – 09** | | | | | | |
| 9. | ನಗರದ ಎಸ್.ಎಸ್.ಪುರಂ ಮತ್ತು ಸಿದ್ದಗಂಗಾ ಬಡಾವಣೆಯಲ್ಲಿ ಸಿಸಿ ರಸ್ತೆ ಮತ್ತು ಡೆಕ್‌ಸ್ಲಾಬ್ ನಿರ್ಮಾಣ | 9.80 | 59000.00 | 1ನೇ ದರ್ಜೆ | 2950+ ತೆರಿಗೆ | ಮಳೆಗಾಲ ಸೇರಿ ಮೂರು ತಿಂಗಳು |
| | ನಗರದ ಎಸ್.ಐ.ಟಿ. 5, 24 ರಿಂದ 30 ರವರೆಗೆ ಮತ್ತು 31 ರಿಂದ 34ನೇ ಕ್ರಾಸ್‌ಗಳಲ್ಲಿ ಬಿಟ್ಟು ಹೋಗಿರುವ ಕಲ್ಲು ಚಪ್ಪಡಿ ಚರಂಡಿ ಮತ್ತು ಡೆಕ್‌ಸ್ಲಾಬ್ ನಿರ್ಮಾಣ ಹಾಗೂ ಹಾಲಿ ಇರುವ ಕಲ್ಲು ಚಪ್ಪಡಿ ಚರಂಡಿ ದುರಸ್ಥಿ ಕಾಮಗಾರಿ. | 9.80 | | | | |
| | ನಗರದ ವಾರ್ಡ್ ಕೃಷ್ಣನಗರ ಮುಖ್ಯ ರಸ್ತೆ ಅಭಿವೃದ್ಧಿ ಮತ್ತು ನಂದೀಶ್ ಲೇಔಟ್‌ನಲ್ಲಿ ಡೆಕ್‌ಸ್ಲಾಬ್ ನಿರ್ಮಾಣ | 9.80 | | | | |
| | **ಒಟ್ಟು** | **29.40** | | | | |
| **ಪ್ಯಾಕೇಜ್ – 10** | | | | | | |
| 10. | ನಗರದ ಸರಸ್ವತಿಪುರಂ 6, 3, 2ನೇ ಕ್ರಾಸ್‌ನಲ್ಲಿ ರಸ್ತೆ ಅಭಿವೃದ್ಧಿ ಮತ್ತು ಚರಂಡಿ, ಡೆಕ್‌ಸ್ಲಾಬ್ ನಿರ್ಮಾಣ | 9.80 | 59000.00 | 1ನೇ ದರ್ಜೆ | 2950+ ತೆರಿಗೆ | ಮಳೆಗಾಲ ಸೇರಿ ಮೂರು ತಿಂಗಳು |
| | ನಗರದ ಗೆದ್ದಲಹಳ್ಳಿಯಲ್ಲಿ ರಸ್ತೆ, ಚರಂಡಿ ಮತ್ತು ಡೆಕ್‌ಸ್ಲಾಬ್ | 9.80 | | | | |

| | | | | | | |
|---|---|---|---|---|---|---|
| | ನಿರ್ಮಾಣ. | | | | | |
| | ನಗರದ ಸಪ್ತಗಿರಿ ಬಡಾವಣೆಯಲ್ಲಿ ಪೈಪ್‌ಲೈನ್ ಕಾಮಗಾರಿ. ಮತ್ತು ಹೊಸದಾಗಿ ನಿರ್ಮಿಸುತ್ತಿರುವ ಓವರ್ ಹೆಡ್‌ಟ್ಯಾಂಕ್ ಹತ್ತಿರ ರಸ್ತೆ ನಿರ್ಮಿಸುವುದು. | 9.80 | | | | |
| | **ಒಟ್ಟು** | **29.40** | | | | |
| **ಪ್ಯಾಕೇಜ್ – 11** | | | | | | |
| 11. | ನಗರದ ನೃಪತುಂಗ ಬಡಾವಣೆ ಮುಖ್ಯ ರಸ್ತೆಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ. | 9.80 | 59000.00 | 1ನೇ ದರ್ಜೆ | 2950+ ತೆರಿಗೆ | ಮಳೆಗಾಲ ಸೇರಿ ಮೂರು ತಿಂಗಳು |
| | ನಗರದ ಮಂಜುನಾಥ ನಗರ 40 ಅಡಿ ರಸ್ತೆಯ ಭೈರವೇಶ್ವರ ಟ್ರೈಡರ್ಸ್ ರವರ ಮನೆಯ ರಸ್ತೆಯಲ್ಲಿ ರಸ್ತೆ ಅಭಿವೃದ್ಧಿ ಪೈಪ್‌ಲೈನ್ ಕಾಮಗಾರಿ. | 9.80 | | | | |
| | ನಗರದ ಕ್ಯಾತ್ಸಂದ್ರ ದಾಸರಬೀದಿಯಲ್ಲಿ, ಗಣಿಗರ ಬೀದಿಯಲ್ಲಿ ಆರ್.ಸಿ.ಸಿ. ರಸ್ತೆ ಕಾಮಗಾರಿ. ಮತ್ತು ಗುಂಡ್ಲಮ್ಮ ದೇವಸ್ಥಾನದ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ | 9.80 | | | | |
| | **ಒಟ್ಟು** | **29.40** | | | | |
| **ಪ್ಯಾಕೇಜ್ – 12** | | | | | | |
| 12. | ನಗರದ ಕ್ಯಾತ್ಸಂದ್ರ ಶಿವರಾಂ ಕಾರಂತನಗರ 2 ಮತ್ತು 3ನೇ ಅಡ್ಡ ರಸ್ತೆಗಳ್ಲಲಿ ರಸ್ತೆ ಅಭಿವೃದ್ಧಿ ಕಾಮಗಾರಿ | 9.80 | 50000.00 | 2ನೇ ದರ್ಜೆ | 1960+ ತೆರಿಗೆ | ಮಳೆಗಾಲ ಸೇರಿ ಮೂರು ತಿಂಗಳು |
| | ನಗರದ ಬಂಡೆಪಾಳ್ಯದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ. ಮತ್ತು ದೇವರಾಯಪಟ್ಟಣ ಹಳೆ ಊರಿನಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ | 9.80 | | | | |
| | **ಒಟ್ಟು** | **19.60** | | | | |
| **ಪ್ಯಾಕೇಜ್ – 13** | | | | | | |
| 13. | ತುಮಕೂರು ಶಿರಾ ರಸ್ತೆಯ ಜೈನ್ ದೇವಸ್ಥಾನದ 2ನೇ ಕ್ರಾಸ್ ಮತ್ತು ಅಡ್ಡ ರಸ್ತೆಗಳ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ | 7.00 | 50000.00 | 2ನೇ ದರ್ಜೆ | 2000+ ತೆರಿಗೆ | ಮಳೆಗಾಲ ಸೇರಿ ಮೂರು ತಿಂಗಳು |
| | ಬೆಳಗುಂಬ ರಸ್ತೆಯ ಶಾರದ ದೇವಿ ನಗರದ 7ನೇ ಮುಖ್ಯ ರಸ್ತೆಯಲ್ಲಿ ಅಭಿವೃದ್ಧಿ ಕಾಮಗಾರಿ. | 5.00 | | | | |
| | ನಗರದ ಜಿಲ್ಲಾಧಿಕಾರಿಗಳ ಕಛೇರಿ ಹಿಂಭಾಗದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ. | 8.00 | | | | |
| | **ಒಟ್ಟು** | **20.00** | | | | |

## 2008–09ನೇ ಸಾಲಿನಲ್ಲಿ ಅನುಮೋದನೆಯಾಗಿರುವ ಎಸ್.ಎಫ್.ಸಿ. ಅನುದಾನದಲ್ಲಿ ಶೇಕಡ 18ಕ್ಕೆ ಕಾಯ್ದಿರಿಸಿರುವ ಅನುದಾನದ ಕಾಮಗಾರಿಗಳು

| ಪ್ಯಾಕೇಜ್ – 01 | | | | | | |
|---|---|---|---|---|---|---|
| 14. | ನಗರದ ಹೊನ್ನೇನಹಳ್ಳಿ ಕಾಲೋ ನಿಗಳಲ್ಲಿ ಚರಂಡಿ ರಸ್ತೆ ಅಭಿವೃದ್ದಿ ಹೊನ್ನೇನಹಳ್ಳಿ ಕಾಲೋನಿಯಲ್ಲಿ ಚರಂಡಿ ರಸ್ತೆ ಅಭಿವೃದ್ದಿ | 1.40 | 42000.00 | 1ನೇ ದರ್ಜೆ | 2100+ ತೆರಿಗೆ | ಮಳೆಗಾಲ ಸೇರಿ ಮೂರು ತಿಂಗಳು |
| | ನಗರದ ಬೋವಿ ಎ.ಕೆ.ಕಾಲೋ ನಿಯಲ್ಲಿ ಕಾಂಕ್ರೀಟ್ ರಸ್ತೆ ಕಾಮಗಾರಿ. | 1.40 | | | | |
| | ನಗರದ ಅರಳಿಮರದಪಾಳ್ಯ ದಲ್ಲಿ ಎ.ಕೆ. ಕಾಲೋನಿಯಲ್ಲಿ ಚರಂಡಿ ಮೇಲೆ ಸೇತುವೆ ನಿರ್ಮಾಣ ಹಾಗೂ ಸಿಮೆಂಟ್ ರಸ್ತೆ ಮತ್ತು ಡೆಕ್‌ಸ್ಲಾಬ್ ನಿರ್ಮಾಣ | 1.40 | | | | |
| | ನಗರದ ಶ್ರೀರಾಮನಗರದ 5 ಮತ್ತು 6ನೇ ಕ್ರಾಸ್‌ನಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಶ್ರೀರಾಮನಗರದಲ್ಲಿ ಶೌಚಾಲಯ ದುರಸ್ತಿ ಕಾಮಗಾರಿ. | 1.40 | | | | |
| | ನಗರದ ದಿಬ್ಬೂರು ಎಸ್.ಟಿ. ಕಾಲೋನಿಯ ಪಾಳೆಗಾರರ ಬೀದಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ | 1.40 | | | | |
| | ನಗರದ ಅರವಿಂದ ನಗರ ಪ್ರದೇಶದಲ್ಲಿ ಚರಂಡಿ ಮತ್ತು ರಸ್ತೆ ಅಭಿವೃದ್ದಿ | 1.40 | | | | |
| | ನಗರದ ಜಯಪುರ ಪ್ರದೇಶದಲ್ಲಿ ಚರಂಡಿ ನಿರ್ಮಾಣ | 1.40 | | | | |
| | ನಗರದ ಗಂಗಸಂದ್ರ ಕಾಲೋನಿ ಯಲ್ಲಿ ರಸ್ತೆ ಅಭಿವೃದ್ದಿ ಕಾಮಗಾರಿ. | 1.40 | | | | |
| | ನಗರದ ಜಯನಗರದ 1 ಮತ್ತು 2ನೇ ಹಾಗೂ ಬನಶಂಕರಿ ದೇವ ಸ್ಥಾನ ಪೆಟ್ರೋಲ್ ಬಂಕ್ ಮುಂದಿರುವ ರಸ್ತೆ ಮತ್ತು ಚರಂಡಿ ಅಭಿವೃದ್ದಿ | 1.40 | | | | |
| | ನಗರದ ಲೇಬರ್ ಕಾಲೋನಿಯಲ್ಲಿ ಶೌಚಾಲಯ ನಿರ್ಮಾಣ | 1.40 | | | | |
| | ನಗರದ ಮಾರಿಯಮ್ಮ ನಗರದಲ್ಲಿ ಚರಂಡಿ ಮತ್ತು ರಸ್ತೆ ಅಭಿವೃದ್ದಿ | 1.40 | | | | |
| | ನಗರದ ಶಾಂತಿನಗರದಲ್ಲಿ ರಸ್ತೆ ಅಭಿವೃದ್ದಿ ಕಾಮಗಾರಿ. | 1.40 | | | | |
| | ನಗರದ ಮುನ್ಸಿಪಲ್ ಲೇಔಟ್‌ನ ಫಕೀರ್‌ಪಾಳ್ಯದ ಬಳಿ ರಸ್ತೆ ಹಾಗೂ ಚರಂಡಿ ಅಭಿವೃದ್ದಿ ಕಾಮಗಾರಿ. | 1.40 | | | | |
| | ನಗರದ ಮರಳೂರು ಕಾಲೋನಿಯಲ್ಲಿ ರಸ್ತೆ, ಚರಂಡಿ ಅಭಿವೃದ್ದಿ. | 1.40 | | | | |
| | ನಗರದ ಅಂಬೇಡ್ಕರ್ ನಗರದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ | 1.40 | | | | |
| | **ಒಟ್ಟು** | **21.00** | | | | |

| | | | | | | |
|---|---|---|---|---|---|---|
| **ಪ್ಯಾಕೇಜ್ – 02** | | | | | | |
| 15. | ನಗರದ ನಿರ್ವಾಣಿ ಲೇಔಟ್ ನಲ್ಲಿರುವ ಸಮುದಾಯ ಭವನ ಮತ್ತು ಕಾಂಪೌಂಡ್ ಗೋಡೆ ನಿರ್ಮಾಣ | 1.40 | 42000.00 | 2ನೇ ದರ್ಜೆ | 1700+ ತೆರಿಗೆ | ಮಳೆಗಾಲ ಸೇರಿ ಮೂರು ತಿಂಗಳು |
| | ನಗರದ ಎನ್.ಆರ್. ಕಾಲೋನಿಯಲ್ಲಿ ಸಮುದಾಯ ಭವನಗಳ ದುರಸ್ತಿ ಮತ್ತು ಪಿ.ಕೆ.ಎಸ್. ಕಾಲೋನಿ ಮುಖ್ಯ ರಸ್ತೆ ಅಭಿವೃದ್ಧಿ ಕಾಮಗಾರಿ. | 1.50 | | | | |
| | ನಗರದ ಅಬ್ದುಲ್ ಖಯ್ಯೂಂ, (ಯೋಜನಾ ನಿರ್ದೇಶಕರು) ರವರ ಮನೆ ಮುಂಭಾಗದಿಂದ ಭಾರತಿ ನಗರದ ರಸ್ತೆಯವರೆಗೆ ಜಲ್ಲಿ ರಸ್ತೆ. | 1.40 | | | | |
| | ನಗರದ ಬಟವಾಡಿ ಎ.ಕೆ. ಕಾಲೋ ನಿಯ 1 ರಿಂದ 5 ಕ್ರಾಸ್‌ಗಳಿಗೆ ಜಲ್ಲಿ ಮತ್ತು ಡಾಂಬರ್ ಹಾಗೂ ಒಳಚರಂಡಿ ಕಾಮಗಾರಿ | 1.60 | | | | |
| | ನಗರದ ಸತ್ಯಮಂಗಲ ಎ.ಕೆ.ಕಾಲೋನಿ ಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ | 1.40 | | | | |
| | ನಗರದ ದೇವರಾಯಪಟ್ಟಣ ಎಸ್.ಸಿ./ ಎಸ್.ಟಿ. ಕಾಲೋ ನಿಯಲ್ಲಿ ಕಾಂಕ್ರಿಟ್ ಚರಂಡಿ ಹಾಗೂ ಕಾಂಕ್ರೀಟ್ ರಸ್ತೆ ನಿರ್ಮಾಣ. ಪೈಪ್ ಲೈನ್ (500 ಮೀಟರ್), ಡೆಕ್‌ಸ್ಲಾಬ್ ಹಾಕುವುದು | 1.40 | | | | |
| | ನಗರದ ಚನ್ನಪ್ಪನಪಾಳ್ಯ ಪ್ರದೇಶದ ಒಳಭಾಗದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ | 1.00 | | | | |
| | ನಗರದ ಹೆಚ್.ಎಂ.ಎಸ್. ಕಾಲೋನಿ ಯಲ್ಲಿ ಸಮುದಾಯ ಭವನಕ್ಕೆ ಕಾಂಪೌಂ ಡ್‌ಗೋಡೆ ಮತ್ತು ರಸ್ತೆ ಅಭಿವೃದ್ಧಿ, ಶೆಟ್ಟಿಹಳ್ಳಿಯಲ್ಲಿರುವ ನಗರ ಸಭೆ ಜಾಗದಲ್ಲಿ ಬಾವಿ ಇದ್ದು ಸದರಿ ಬಾವಿಯನ್ನು ತೆರವುಗೊಳಿಸಿ ಸಮು ದಾಯ ಭವನ ನಿರ್ಮಾಣ ಮಾಡುವುದು. | 1.00 | | | | |
| | ನಗರದ ಬಡ್ಡಿಹಳ್ಳಿ 9ನೇ ಮುಖ್ಯ ರಸ್ತೆಯಲ್ಲಿ ಚರಂಡಿ ಮತ್ತು ರಸ್ತೆ ನಿರ್ಮಾಣ | 1.40 | | | | |
| | ನಗರದ ಹಳೆ ಹರಿಜನ ಕಾಲೋನಿ ಮತ್ತು ಸೀಬಿತೋಟ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿ. | 1.50 | | | | |
| | ನಗರದ ಹರಿಜನ ಕಾಲೋನಿ, ಮೇದರ ಬೀದಿ, ಸುಭಾಷ್ ನಗರದಲ್ಲಿ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಹಾಗೂ 3'' ಪೈಪ್‌ಲೈನ್ ನಿರ್ಮಾಣ ಕಾಮಗಾರಿ. | 1.50 | | | | |
| | ನಗರದ ಎ.ಕೆ.ಕಾಲೋನಿಯ ಲ್ಲಿರುವ ಎಲ್ಲಾ ಐದು ರಸ್ತೆಗಳ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ | 1.53 | | | | |
| | **ಒಟ್ಟು** | **16.63** | | | | |

## ಷರತ್ತುಗಳು

1. ಟೆಂಡರ್ ಫಾರಂ ಬೆಲೆಯನ್ನು ನಗದಾಗಿ ನಗರಸಭೆಯ ನಗದು ಶಾಖೆಯಲ್ಲಿ ಪಾವತಿಸಿ ಟೆಂಡರ್ ಫಾರಂ ಪಡೆಯಬಹುದು. ಅರ್ಜಿಯನ್ನು ಸಲ್ಲಿಸುವಾಗ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ದರ್ಜೆ ನೊಂದಾಯಿತರಾಗಿರುವ **ಬಗ್ಗೆ ಪ್ರಮಾಣ ಪತ್ರವನ್ನು** ಹಾಜರುಪಡಿಸಿ ದಾಖಲಾತಿ ಪುಸ್ತಕ (ಪಾಸ್ ಬುಕ್)ದಲ್ಲಿ ದಾಖಲಾತಿ ಮಾಡಿಸಿಕೊಳ್ಳಬೇಕು.
2. ಇಎಂಡಿ ಹಣವನ್ನು ಪೌರಾಯುಕ್ತರು, ನಗರಸಭೆ, ತುಮಕೂರು ಇವರ ಹೆಸರಿಗೆ ಜಮಾ ಮಾಡಬಹುದಾದಂತಹ ಡಿಡಿ / ಎಫ್‌ಡಿಆರ್‌ಗಳನ್ನು ಅಥವಾ ನಗರಸಭಾ ಕಾರ್ಯಾಲಯದಲ್ಲಿ ನಗದು ಜಮಾ ಮಾಡಿ ರಸೀದಿಯೊಂದಿಗೆ ಟೆಂಡರ್ ಜೊತೆಯಲ್ಲಿ ಸಲ್ಲಿಸಬೇಕು. **ಎನ್.ಎಸ್.ಸಿ. ಗಳನ್ನು ಸ್ವೀಕರಿಸಲಾಗುವುದಿಲ್ಲ.**
3. ಟೆಂಡರ್ ಫಾರಂನಲ್ಲಿ ದರವನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.
4. ಮೇಲೆ ನಿಗಧಿಪಡಿಸಿರುವ ಯಾವುದೇ ದಿನಾಂಕಗಳು ಸರ್ಕಾರಿ ರಜಾ ದಿನಗಳೆಂದು ಘೋಷಿಸಲ್ಪಟ್ಟಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು.
5. ಮೇಲಿನ ಕಾಮಗಾರಿಗಳಿಗೆ ಅರ್ಜಿ ಸಲ್ಲಿಸುವ ಗುತ್ತಿಗೆದಾರರು, ಅದೇ ರೀತಿಯ ಕಾಮಗಾರಿಯನ್ನು (ಎ) ಕಾಮಗಾರಿಗೆ ನಿಗಧಿಪಡಿಸಿದ ಮೊತ್ತದಲ್ಲಿ ಶೇಕಡ 50ರಷ್ಟು ಮೊತ್ತಕ್ಕೆ ಹಿಂದಿನ ಐದು ಆರ್ಥಿಕ ವರ್ಷಗಳಲ್ಲಿನ ಯಾವುದಾದರು ಒಂದು ಆರ್ಥಿಕ ವರ್ಷದಲ್ಲಿ ಕೆಲಸ ಕೈಗೊಂಡು ತೃಪ್ತಿಕರವಾಗಿ ಪೂರೈಸಿರಬೇಕು ಇದಕ್ಕೆ ಸಂಬಂಧಿಸಿದಂತೆ ಸಕ್ಷಮ ಅಧಿಕಾರಿಗಳ ದೃಢೀಕರಣ ಪತ್ರವನ್ನು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿಯೇ ಒದಗಿಸಬೇಕು. ಮತ್ತು ಗುತ್ತಿಗೆದಾರರ ಆರ್ಥಿಕ ಸಾಮರ್ಥ್ಯದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ದೃಢೀಕರಣವನ್ನು ಕಾಮಗಾರಿಯನ್ನು ನಿಗಧಿತ ಅವಧಿಯೊಳಗೆ ಪೂರೈಸಿಕೊಡುವ ಬಗ್ಗೆ ಕಾರ್ಯಕ್ರಮವನ್ನು ರೂಪಿಸಿ ಟೆಂಡರ್‌ನೊಂದಿಗೆ ಒದಗಿಸತಕ್ಕದ್ದು.
6. ನಿಬಂಧನೆಗಳನ್ನು ನಮೂದಿಸಿ ಸಲ್ಲಿಸುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
7. ಯಾವ ಕಾರಣವನ್ನು ಸಹ ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
8. ಮೇಲಿನ ಕಾಮಗಾರಿಯಲ್ಲಿ ಏನಾದರೂ ಸೇರ್ಪಡೆ ಅಥವಾ ಮಾರ್ಪಡಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
9. ಕಾಮಗಾರಿಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಗುತ್ತಿಗೆದಾರರೇ ಒದಗಿಸಿಕೊಳ್ಳತಕ್ಕದ್ದು.
10. ಗುತ್ತಿಗೆದಾರರು ಕೆಲಸ ನಿರ್ವಹಿಸುವ ಸಮಯದಲ್ಲಿ **ಕೆಲಸ ನಿರ್ವಹಿಸುವ ಮುನ್ನ ಕೆಲಸ ನಿರ್ವಹಿಸುವಾಗ ಮತ್ತು ಕೆಲಸ ಪೂರ್ಣಗೊಂಡಾಗ ವಿವಿಧ ಹಂತಗಳ ಫೋಟೋಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ತೆಗೆಸಿ ಸಲ್ಲಿಸುವುದು.**
11. ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 10:ಎಸ್‌ಎಫ್‌ಸಿ/2007 ದಿನಾಂಕ 19–1–2007ರ **ಅನ್ವಯ ಕಾಮಗಾರಿಗಳನ್ನು ಮೂರನೇ ಪಾರ್ಟಿ ತಪಾಸಣೆಗೆ ಒಳಪಟ್ಟಿರುತ್ತೆ.** ಹಾಗೂ ಕಾಮಗಾರಿ ಮುಗಿದ ನಂತರ ಬಿಲ್ ಮಾಡುವ ಸಮಯದಲ್ಲಿ **ಮೂರನೇ ಪಾರ್ಟಿಯ ಪರಿಶೀಲನಾ ವರದಿ ಪಡೆದ ನಂತರ ಬಿಲ್ ಪಾವತಿಸಲಾಗುವುದು.**
12. ಗುತ್ತಿಗೆದಾರರು ಈ ಹಿಂದೆ ಯಾವುದೇ ಕೆಲಸಗಳನ್ನು ಪೂರ್ಣಗೊಳಿಸದೆ ಮಧ್ಯದಲ್ಲಿ ತೊರೆದಿರಬಾರದು, ಹಾಗೂ ಸಕಾರಣವಿಲ್ಲದೆ ಯಾವುದೇ ಕಾಮಗಾರಿಯನ್ನು ವಿಳಂಬವಾಗಿ ಪೂರೈಸಿರಬಾರದು. ಇಂತಹ ಗುತ್ತಿಗೆದಾರರ ಅರ್ಜಿಗಳನ್ನು ನೇರವಾಗಿ ತಿರಸ್ಕರಿಸಲಾಗುವುದು. ಒಂದು ವೇಳೆ ಗುತ್ತಿಗೆ ಅವದಿ ಪೂರ್ಣಗೊಂಡಿದ್ದರೂ ಕಾಮಗಾರಿ ಪೂರ್ಣಗೊಳಿಸದಿದ್ದಲ್ಲಿ, ಕುಂಠಿತವಾಗಿದ್ದಲ್ಲಿ ಅಂತಹ ಗುತ್ತಿಗೆದಾರರ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಗುತ್ತಿಗೆದಾರರು ಟೆಂಡರ್ ಸಲ್ಲಿಸುವಾಗ ಲಕೋಟೆಯ ಮೇಲೆ ಮತ್ತು ತಮ್ಮ ಪೂರ್ಣ ವಿಳಾಸವನ್ನು ನಮೂದಿಸಬೇಕು.
13. ಎಲ್ಲಾ ಕೆಲಸಗಳಿಗೆ ಸರ್ಕಾರಿ ಆದೇಶ ಸಂ:ಪಿಡಬ್ಲ್ಯೂಡಿ 344:ಸಿಆರ್‌ಎಂ:2000:ದಿ:15–1–2002 ರಂತೆ ಅಗತ್ಯವಾಗಿ ಸ್ವಂತವಾಗಿ ಹೊಂದಿರಬೇಕಾದ ಯಂತ್ರೋಪಕರಣಗಳು 1) ವೈಬ್ರೇಟರ್, 2) ಕಾಂಕ್ರಿಟ್ ಮಿಕ್ಸರ್, 3) ಸೆಂಟ್ರಿಂಗ್ ಸಾಮಗ್ರಿಗಳು, 4) ಟಿಪ್ಪರ್–2, 5) ಏರ್ ಕಂಪ್ರೇಸರ್, 6) ಮೆಕಾನಿಕಲ್ ಸ್ಪ್ರೇಯರ್, 7) ಡಿಆರ್‌ಆರ್ ಹಾಗೂ ಸ್ವಂತವಾಗಿ ಅಥವಾ ಬಾಡಿಗೆ ಆಧಾರ ಮೇಲೆ ಹೊಂದಿರಬೇಕಾದ ಯಂತ್ರೋಪಕರಣಗಳು 1) ಹೆಚ್‌ಎಂಪಿ ಪೇವರ್ ಫಿನಿಶರ್ ಹಾಗೂ

ಇತರೆ ಅವಶ್ಯಕ ಯಂತ್ರೋಪಕರಣಗಳು, ಈ ಯಂತ್ರೋಪಕರಣಗಳು ಚಾಲ್ತಿಯಲ್ಲಿರುವ ಬಗ್ಗೆ ದಾಖಲಾತಿಗಳನ್ನು ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಿ ಅರ್ಜಿ ಸಲ್ಲಿಸುವ ಸಮಯದಲ್ಲೇ ಒದಗಿಸತಕ್ಕದ್ದು. ಒಂದು ವೇಳೆ ಈ ಯಂತ್ರೋಪಕರಣಗಳನ್ನು ಬಾಡಿಗೆ ಮೇರೆಗೆ ಪಡೆಯಲಿಚ್ಚಿಸಿದಲ್ಲಿ ಸದರಿ ಯಂತ್ರೋಪಕರಣಗಳ ಮಾಲೀಕರಿಂದ ಸಹಮತಿ ಪತ್ರವನ್ನು ಪಡೆದು ಟೆಂಡರ್ ಫಾರಂನೊಂದಿಗೆ ಲಗತ್ತಿಸತಕ್ಕದ್ದು. ಇಲ್ಲವಾದಲ್ಲಿ ಅಂತಹ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ.

14. ಗುತ್ತಿಗೆದಾರರು ಟೆಂಡರ್ ಸಲ್ಲಿಸುವಾಗ 'ಬಿ' ಷೆಡ್ಯೂಲ್‌ನಲ್ಲಿ ದರಗಳನ್ನು ನಮೂದಿಸುವಾಗ ಸ್ಪಷ್ಟವಾಗಿ ಒಂದೇ ರೀತಿಯ ಬರವಣಿಗೆಯಲ್ಲಿ ಪ್ರತಿ ಪುಟಕ್ಕೂ ಸಹಿಯೊಂದಿಗೆ ಯಾವುದೇ ರೀತಿಯ ವ್ಯತ್ಯಾಸವಾಗದಂತೆ ನಮೂದಿಸಬೇಕು. ಇಲ್ಲವಾದಲ್ಲಿ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ.

15. ಗುತ್ತಿಗೆದಾರರು ಸ್ವಂತ ಸಾಮಗ್ರಿಗಳನ್ನು ಒದಗಿಸಿಕೊಂಡು ಇಲಾಖಾ ನಿಯಮವಳಿಗಳ ಪ್ರಕಾರ ಕೆಲಸವನ್ನು ಪೂರ್ಣಗೊಳಿಸಬೇಕು. ಮತ್ತು ಗುತ್ತಿಗೆದಾರರು ಸಾಮಗ್ರಿಗಳನ್ನು ಸ್ವಂತ ಖರ್ಚಿನಲ್ಲಿ ತಂದು ಗುಣಮಟ್ಟದ ದೃಢೀಕರಿಸಿದ ನಂತರ ಉಪಯೋಗಿಸತಕ್ಕದ್ದು.

16. **ಗುತ್ತಿಗೆದಾರರು ಟೆಂಡರ್ ಸಲ್ಲಿಸುವಾಗ ಲಕೋಟೆಯ ಮೇಲೆ ಮತ್ತು 'ಬಿ' ಷೆಡ್ಯೂಲ್‌ನಲ್ಲಿ ತಮ್ಮ ಪೂರ್ಣ ವಿಳಾಸವನ್ನು ನಮೂದಿಸಬೇಕು. ಇಲ್ಲವಾದಲ್ಲಿ** ನೇರವಾಗಿ ತೀರಸ್ಕರಿಸಲಾಗುವುದು.

17. ಟೆಂಡರ್‌ದಾರರು ಜಂಟಿಯಾಗಿ (ಇನ್ನೋರ್ವ ಗುತ್ತಿಗೆದಾರರೊಂದಿಗೆ) ಭಾಗವಹಿಸಲು ಅವಕಾಶವಿಲ್ಲ.

18 ಟೆಂಡರ್ ಅನುಮೋದನೆ ಆದ ಗುತ್ತಿಗೆದಾರರು ಟೆಂಡರ್ ಕರಾರು ಮಾಡಿಕೊಳ್ಳುವ ಮೊದಲು ಟೆಂಡರ್ ಕರಾರಿನ ಮೊತ್ತಕ್ಕೆ ಶೇಕಡ 5 ರಷ್ಟು ಹಣವನ್ನು ಪ್ರಗತಿ ಭದ್ರತಾ ಠೇವಣಿಯಾಗಿ ನೀಡಿದ ನಂತರ ಕಾರ್ಯಾದೇಶ ನೀಡಲಾಗುವುದು.

19. ಈ ಕಾಮಗಾರಿಗಳಿಗೆ ಕಾರ್ಯಾದೇಶದ ನೀಡಿದ ದಿನಾಂಕದಿಂದ 15 ದಿನಗಳೊಳಗಾಗಿ ಖಡ್ಡಾಯವಾಗಿ ಕಾಮಗಾರಿಗಳನ್ನು ಪ್ರಾರಂಭಿಸತಕ್ಕದ್ದು.

20. **ಕಾಮಗಾರಿ ಮುಗಿದ ದಿನಾಂಕದಿಂದ ಎರಡು ವರ್ಷಗಳವರೆಗೆ ಕಾಮಗಾರಿ ನಿರ್ವಹಣೆಯನ್ನು ಸ್ವಂತ ಖರ್ಚಿನಲ್ಲಿ ಗುತ್ತಿಗೆದಾರರೇ ನಿರ್ವಹಿಸತಕ್ಕದ್ದು.**

21. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.tumkurcity.gov.in ಹಾಗೂ ನಗರಸಭೆ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

| | | | |
|---|---|---|---|
| ಸಹಿ/– | ಸಹಿ/– | ಸಹಿ/– | ಸಹಿ/– |
| **ಅಧ್ಯಕ್ಷರು** | **ಉಪಾಧ್ಯಕ್ಷರು** | **ಸ್ಥಾಯಿ ಸಮಿತಿ ಅಧ್ಯಕ್ಷರು** | **ಪೌರಾಯುಕ್ತರು** |
| **ನಗರಸಭೆ, ತುಮಕೂರು.** | **ನಗರಸಭೆ, ತುಮಕೂರು.** | **ನಗರಸಭೆ, ತುಮಕೂರು.** | **ನಗರಸಭೆ, ತುಮಕೂರು.** |